ಕಲಿಸುತ್ತವೆ. ನೀವೊಂದು ಕ್ಯಾಮೆರಾ ಕೊಂಡು ಇಂತಹ ದುಸ್ಸಾಹಸಗಳಿಗೆ ಇಳಿಯದ ಹೊರತು ನಾನಿಲ್ಲಿ ಕೊರೆದ ಅಷ್ಟೂ ಮಾತುಗಳು ನಿಮಗೆ ಬುರುಡೆ ಪುರಾಣವಾಗಿ ಕಂಡರೂ ಅಚ್ಚರಿಯಿಲ್ಲ. ತಲೆಹರಟೆ ಎನಿಸಿದರೂ ಅಸಹಜವೇನಲ್ಲ.

ನಮ್ಮ ಉಪ್ಪುನೀರ ಪಯಣ ಮುಂದುವರೆದಿತ್ತು. ತಿರುಗಿ ನೋಡುವಾಗ ಸೂರ್ಯ ಮೂಡತೊಡಗಿದ್ದ. ಹಕ್ಕಿಗಳು ಈಗ ಗುಂಪಾಗಿ ಹಾರಾಟ ಶುರುಮಾಡಿದ್ದವು. ಬೆಳಗಿನ ಹೊತ್ತಿನಲ್ಲಿ ಖಗಗಳು ಯಾವಾಗಲೂ ಹೆಚ್ಚು ಚೈತನ್ಯಪೂರ್ಣವಾಗಿರುತ್ತವೆ. ಮುಂಜಾನೆಯ ಹೊತ್ತು ಆಹಾರ ಹುಡುಕಿಕೊಳ್ಳುವ ತವಕ ಇವುಗಳಲ್ಲಿ ತುಸು ಜಾಸ್ತಿ. ಇವುಗಳಿಗಂತೂ ಇದು ಮೀನು ಬೇಟೆಯ ಸುಸಮಯ.

ಕೆಲವು ಸಣ್ಣಪುಟ್ಟ ಏಡಿ, ಶಂಖದ ಹುಳು, ಕಪ್ಪೆ ಚಿಪ್ಪುಗಳ ಹಿಡಿದು ಮುಕ್ಕಲು ಹೆಣಗಾಡುತ್ತಿರುತ್ತವೆ. ಆಗಸದಲ್ಲಿ ಹಾರಾಡುತ್ತಾ ನೀರ ಮೇಲೆ ದೃಷ್ಟಿ ನೆಟ್ಟ ಹದ್ದುಗಳು, ರಿವರ್ ಟರ್ನ್ ಹಕ್ಕಿಗಳು ಮೀನುಗಳ ಚಲನವಲನ ಗಮನಿಸುತ್ತಾ ಗಸ್ತು ತಿರುಗುತ್ತವೆ. ಇವುಗಳ ನೋಟವೇ ಬಲು ಸೂಕ್ಷ್ಮ. ಅಷ್ಟು ಎತ್ತರದಿಂದಲೇ ತಮ್ಮ ಬೇಟೆಯ ಗಮನಿಸಿ ಕರಾರುವಾಕ್ಕಾದ ಗುರಿ ಇಟ್ಟು ದಾಳಿ ಮಾಡುತ್ತವೆ. ಕ್ಷಣಾರ್ಧದಲ್ಲಿ ಮೀನು ಎತ್ತಿಕೊಂಡು ಮ್ಯಾಂಗ್ರೋವ್ ಮರಗಳ ಮೇಲೆ ಇಲ್ಲವೇ ನಾಡದೋಣಿಗರು ಭದ್ರತೆಗೆ ನಿಲ್ಲಿಸಿದ ಮರದ ಗೂಟಗಳ ಮೇಲೆ ಹೋಗಿ ಕೂರುತ್ತವೆ. ಅಂತಹ ಕಡೆ ಹೊಂಚು ಹಾಕಿ ನೆಲೆ ನಿಂತು ಪಟ ತೆಗೆಯುವುದೆಂದು ಪ್ಲಾನು ಮಾಡಿಕೊಂಡಿದ್ದೆವು.

ಕ್ರಾಬ್ ಪ್ಲೋವರ್ (ಏಡಿಗೊರವ) ಬ್ರೌನ್ ಹೆಡೆಡ್ ಗಲ್, ಸ್ಯಾಂಡ್ ಪೈಪರ್, ಲಿಟಲ್ ಸ್ಟಿಂಟ್, ತರಹದ ಹಕ್ಕಿಗಳು ಹೆಚ್ಚಾಗಿ ಗುಂಪು ಗುಂಪಾಗಿ ಇರುತ್ತವೆ. ಕೊಂಚ ಅಪಾಯ ಕಂಡರೂ ಗಾಬರಿಯಾಗಿ ಒಮ್ಮೆಗೇ ಪುರ್ರೆಂದು ಹಾರಿ ಮತ್ತೊಂದು ಕಡೆ ಹೋಗಿ ಇಳಿಯುತ್ತವೆ. ನಾವು ಹೆಚ್ಚು ಸಮೀಪವಾಗುತ್ತಲೂ ಇವು ಪರಸ್ಪರ ಮಾತಾಡಿಕೊಂಡು ಭಯ ಪ್ರಕಟಿಸಿ ಪುಸಕ್ಕನೆ ಗಗನಕ್ಕೆ ಚಿಮ್ಮಿ ಬಿಡುತ್ತಿದ್ದವು. ಹೀಗೆ ಇವು ಒಮ್ಮೆಗೆ ಆಗಸಕ್ಕೆ ಹಾರುವ ಒಂದು ನೋಟ, ಲಕ್ಷ ಸಂತೋಷಗಳಿಗೆ ಸಮಾನ. ಇಲ್ಲಿನ ಕೆಲ ಚಿತ್ರಗಳೇ ನಿಮಗೆ ಈ ಸಂದರ್ಭದ ಸೊಬಗನ್ನು ಬಣ್ಣಿಸಬಲ್ಲವು.



'ಇವುಗಳಿಗೆ ಒಬ್ಬ ಮೈನ್ ಲೀಡರ್ ಇರುತ್ತಾನೆ ಸಾರ್. ಅವನೇ ಎಲ್ಲರಿಗೂ ಡೈರಕ್ಷನ್ ಕೊಡುವುದು' ಎಂದು ನಾರಾಯಣ್ ಹೇಳಿದ. ಅವನ ಮಾತು ನಿಜವಿದ್ದರೂ ಇದ್ದೀತು. ಆದರೂ 'ಗ್ಯಾಂಗ್ ಲೀಡರ್ ಗಂಡು ಅಂತ ಅಷ್ಟು ಕರೆಕ್ಟಾಗಿ ಹೇಗೆ ಹೇಳುತ್ತೀಯಾ ನಾರಾಯಣ್' ಎಂದು ಪ್ರಶ್ನಿಸಿದೆ. 'ಎಲ್ಲಾ ಕಡೆ ಗಂಡಸಿನ ದರ್ಬಾರೆ ನಡಿಯದಲ್ಲವಾ ಸಾರೂ, ಇಲ್ಲೂ ಹೀಗೆ ಅಲ್ವಾ?' ಎಂದು ಒಂದು ಸರಳ ಸಮಜಾಯಿಷಿ ಬಿಸಾಡಿದ. ಈ ವಿಷಯದಲ್ಲಿ ಅವನಷ್ಟು ಪರಿಣಿತನಲ್ಲದ ನಾನು ಇದ್ದರೂ ಇರಬಹುದೆಂದು ಒಪ್ಪಿಕೊಂಡೆ.

ಅವುಗಳ ಕ್ರಮಬದ್ಧ ಹಾರಾಟ, ಸೂಚಿಸಿದ ಕಡೆ ನಿಗದಿತವಾಗಿ ಇಳಿಯುವ ಸಂಗತಿಗಳ ಗಮನಿಸಿದರೆ ಟೀಮ್ ಲೀಡರೊಬ್ಬ ಇರಲೇಬೇಕು ಎನಿಸುತ್ತಿತ್ತು. ಕೆಲ ಹಕ್ಕಿಗಳ ಗುಂಪಿಗೆ ಹೀಗೆ ಒಬ್ಬೊಬ್ಬ ಅನುಭವಿ ನಾಯಕ ಇರುವುದು ಹೌದೆಂದು ಪಕ್ಷಿಶಾಸ್ತ್ರಜ್ಞರೂ ಹೇಳುತ್ತಾರೆ. ಆ ಮುಂದಾಳು ಸಾವಿರಾರು ಮೈಲುಗಳ ವಲಸೆ ಪ್ರಯಾಣದಲ್ಲಿ ದಿಕ್ಕು ತೋರುವ ಮಾರ್ಗದರ್ಶಕನಾಗಿ ಕಾರ್ಯ ನಿರ್ವಹಿಸುತ್ತಾನೆ. ಆತನ ಪೂರ್ವಾನುಭವದ ಜ್ಞಾನ ಎಲ್ಲರ ಒಳಿತಿಗೆ ಅನುಕೂಲವಾಗುತ್ತದೆ. ತಾನು ಒಂದೊಮ್ಮೆ ಸೋತರೆ, ಇಲ್ಲವೇ ಸತ್ತರೆ ದಾರಿದೋರುವ